# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1047(1132) |
| ಸದಸ್ಯರ ಹೆಸರು | : | ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 17.03.2025 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಲ್ಲಿ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಸೇವೆಗಳ ಗುಣಮಟ್ಟ ಕುಸಿಯುತ್ತಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ; ಹಾಗಿದ್ದಲ್ಲಿ ಸುಧಾರಣೆ ಕುರಿತು ಕೈಗೊಂಡಿರುವ ಕ್ರಮಗಳೇನು; | ರಾಜ್ಯದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಲ್ಲಿ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಸೇವೆಗಳ ಗುಣಮಟ್ಟವನ್ನು ಗಣನೀಯವಾಗಿ ಹೆಚ್ಚಿಸಲು, ಸರ್ಕಾರ ಗಂಭೀರವಾಗಿ ಪರಿಗಣಿಸಿ ಈ ಕೆಳಕಂಡ ವಿವಿಧ ಶೈಕ್ಷಣಿಕ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲಾಗಿದೆ.<br><br>• **ಪೂರ್ವ ಪ್ರಾಥಮಿಕ ಶಿಕ್ಷಣ**: 2019-20ನೇ ಸಾಲಿನಿಂದ ಪೂರ್ವ ಪ್ರಾಥಮಿಕ ಶಿಕ್ಷಣ<br><br>• **ದ್ವಿ-ಭಾಷ ಮಾಧ್ಯಮ**: 2019-20ನೇ ಸಾಲಿನಿಂದ ತರಗತಿಗಳ ಸ್ಥಾಪನೆ<br><br>• **ನಲಿ-ಕಲಿ:** 2008 ರಿಂದ ಚಟುವಟಿಕ/ಆಟ ಆಧಾರಿತ ನಲಿ-ಕಲಿ ಪದ್ಧತಿ. ಸರ್ಕಾರಿ ಶಾಲೆಗಳ 1 ರಿಂದ 3ನೇ ತರಗತಿಗಳಲ್ಲಿ ನಲಿ-ಕಲಿ ಬೋಧನಾ ಕಲಿಕಾ ಪದ್ಧತಿಯು ಸ್ವ-ಕಲಿಕೆ, ಸ್ವ-ವೇಗದ ಕಲಿಕೆ ಮತ್ತು ಸ್ವ-ಮೌಲ್ಯಮಾಪನ ಹಾಗೂ ಸಂತಸದಾಯಕ ಕಲಿಕೆಯ ತತ್ವಗಳನ್ನು ಒಳಗೊಂಡಿದೆ. ಈ ಕಲಿಕೆಯ ತತ್ವಗಳಿಗೆ ಪೂರಕವಾಗಿ ಶಿಕ್ಷಣ ತಜ್ಞರ ಸಲಹೆಯಂತೆ ಕಲಿಕಾ ಸಾಮಗ್ರಿಗಳನ್ನು ಸಿದ್ಧಪಡಿಸಿ ಎಲ್ಲಾ ಶಾಲೆಗಳಿಗೂ ಒದಗಿಸಲಾಗಿದೆ.<br><br>• **ಕೆ.ಎಸ್.ಕ್ಯೂ.ಎ.ಎ.ಸಿ.**: ಶಾಲೆಗಳಲ್ಲಿ ಸಾಮರ್ಥ್ಯಾಧಾರಿತ ಮೌಲ್ಯಮಾಪನ, ಶಾಲೆಗಳನ್ನು ಮೌಲ್ಯಾಂಕನ ಮಾಡಿ ಮಾನ್ಯತೆ ನೀಡಲು ಕೆ.ಎಸ್.ಕ್ಯೂ.ಎ.ಎ.ಸಿ. |

| | | |
|---|---|---|
| | | • **ಶಿಕ್ಷಕರಿಗೆ ತರಬೇತಿಗಳು**: ಶಿಕ್ಷಕರಿಗೆ ಅಗತ್ಯತೆಗನುಗುಣವಾಗಿ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಮಕ್ಕಳಿಗೆ ಒದಗಿಸಲು ಶಿಕ್ಷಕರಿಗೆ ವೃತ್ತಿಪರ ಬೆಳವಣಿಗೆಯ ತರಬೇತಿಗಳನ್ನು ಪ್ರತಿ ವರ್ಷ ನೀಡಲಾಗುತ್ತಿದೆ. ನಿಷ್ಠಾ ಆನ್ಲೈನ್ ತರಬೇತಿ, ಗುರುಚೇತನ ಮಾಡ್ಯೂಲ್ಗಳ ತರಬೇತಿ, ವಿಷಯವಾರು ಆನ್ಲೈನ್ ಮಾಡ್ಯೂಲ್ಗಳ ತರಬೇತಿ, ಪ್ರೌಢ ಶಾಲಾ ಶಿಕ್ಷಕರಿಗೆ ಗಣಿತ ಮತ್ತು ವಿಜ್ಞಾನ ವಿಷಯಕ್ಕೆ ಸಂಬಂಧಿಸಿದಂತೆ ಐಐಎಸ್ಸಿ, ಚಳ್ಳಕೆರೆಯಲ್ಲಿ ತರಬೇತಿ ಹಾಗೂ ಇನ್ನಿತರೆ ತರಬೇತಿಗಳನ್ನು ಶಿಕ್ಷಕರಿಗೆ ನೀಡಲಾಗಿದೆ .<br><br>• **ಕಲಿಕಾ ಚೇತರಿಕೆ/ಕಲಿಕಾ ಬಲವರ್ಧನೆ/ಓದು ಕರ್ನಾಟಕ, ಗಣಿಕ ಗಣಕ ಆಂದೋಲನ**: ಹಾಗೆಯೇ 4 ಮತ್ತು 10ನೇ ತರಗತಿಗಳಲ್ಲಿ ಕಳೆದ ಕೆಲವು ಸಾಲುಗಳಿಂದ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಹಾಗೂ ಸ್ವ-ಕಲಿಕೆಗೆ ಬೆಂಬಲಿಸುವಂತಹ ವಿದ್ಯಾರ್ಥಿ ಚಟುವಟಿಕಾ ಪುಸ್ತಕಗಳನ್ನು ಕಲಿಕಾ ಚೇತರಿಕೆ/ಕಲಿಕಾ ಬಲವರ್ಧನೆ/ಓದು ಕರ್ನಾಟಕ, ಗಣಿಕ ಗಣಕ ಆಂದೋಲನ ಅಂತಹ ವಿವಿಧ ಕಾರ್ಯಕ್ರಮದಡಿ ನೀಡಲಾಗುತ್ತಿದೆ.<br><br>• **ಗಣಿತ ಗಣಕ**: 93 ಮಹತ್ವಾಕಾಂಕ್ಷಿ ತಾಲ್ಲೂಕುಗಳ 3 ರಿಂದ 5ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ 6,99,705 ವಿದ್ಯಾರ್ಥಿಗಳಿಗೆ ಗಣಿತ ವಿಷಯದಲ್ಲಿ ಆಸಕ್ತಿ ಮೂಡಿಸಿ ಗಣಿತದ ಪರಿಕಲ್ಪನೆಗಳನ್ನು ಸುಲಭವಾಗಿ ಕಲಿಯುವಂತೆ ಗಣಿತ ಗಣಕ ಕಾರ್ಯಕ್ರಮದ ಮೂಲಕ ಖಚಿತಪಡಿಸಿಕೊಳ್ಳಲಾಗುತ್ತಿದೆ.<br><br>• **ಮರುಸಿಂಚನ:** ಮುಂದುವರೆಸುತ್ತಾ 6 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ತರಗತಿಗನುಗುಣವಾದ ಕಲಿಕಾ ಫಲಗಳನ್ನು ಸಾಧಿಸಿ 10ನೇ ತರಗತಿ ಪರೀಕ್ಷೆಯನ್ನು ಯಶಸ್ವಿಯಾಗಿ ಸಾಧಿಸುವಂತೆ ಅನುಕೂಲಿಸಲು ಮರುಸಿಂಚನ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. |

| | | |
|---|---|---|
| | | • **ತಂತ್ರಜ್ಞಾನ ಬೆಂಬಲಿತ ಕಲಿಕಾ ಕಾರ್ಯಕ್ರಮ**: ಸದರಿ ಕಾರ್ಯಕ್ರಮವನ್ನು ರಾಜ್ಯದ ಸರ್ಕಾರಿ ಪ್ರೌಢಶಾಲೆಗಳಲ್ಲಿ 2016-17 ರಿಂದ ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಕಾರ್ಯಕ್ರಮದಡಿ 4687 ಸರ್ಕಾರಿ ಪ್ರೌಢಶಾಲೆಗಳಿಗೆ ಲ್ಯಾಪ್ಟಾಪ್ ಮತ್ತು 3463 ಸರ್ಕಾರಿ ಪ್ರೌಢಶಾಲೆಗಳಿಗೆ ಪ್ರೊಜೆಕ್ಟರ್ ಒದಗಿಸಲಾಗಿದೆ. 2710 ಸರ್ಕಾರಿ ಪ್ರೌಢಶಾಲೆಗಳಿಗೆ ಕಂಪ್ಯೂಟರ್ ಲ್ಯಾಬ್ ಒದಗಿಸಲಾಗಿದೆ. ಸದರಿ ಉಪಕರಣಗಳನ್ನು ಬಳಸಿಕೊಂಡು ಇ-ಸಂಪನ್ಮೂಲಗಳನ್ನು ಸೃಜಿಸಿ ತರಗತಿಗಳ ಬೋಧನಾ ಕಲಿಕಾ ಪ್ರಕ್ರಿಯೆ ಉತ್ತಮಪಡಿಸಲಾಗುತ್ತಿದೆ. 38732 ಶಿಕ್ಷಕರಿಗೆ ಇಂಡಕ್ಷನ್ ತರಬೇತಿಯನ್ನು ಹಾಗೂ 9744 ಶಿಕ್ಷಕರಿಗೆ ರಿಫ್ರೆಷರ್ ತರಬೇತಿಯನ್ನು ನೀಡಲಾಗಿದೆ.<br><br>• **ಕಲಿಕಾ ಚೇತರಿಕೆ**: ಗುಣಾತ್ಮಕ ಶಿಕ್ಷಣ ನೀಡುವ ನಿಟ್ಟಿನಲ್ಲಿ ವಿದ್ಯಾರ್ಥಿಗಳ ಕಲಿಕೆಗೆ ಅನುವಾಗುವಂತೆ 2022-23 ನೇ ಶೈಕ್ಷಣಿಕ ವರ್ಷವನ್ನು ಕಲಿಕಾ ಚೇತರಿಕೆ ವರ್ಷವೆಂದು ಘೋಷಿಸಲಾಗಿದ್ದು, ಉಪಕ್ರಮದ ಯಶಸ್ವಿ ಅನುಷ್ಠಾನಕ್ಕಾಗಿ ವಿದ್ಯಾರ್ಥಿ ಚಟುವಟಿಕಾ ಪುಸ್ತಕಗಳು ಹಾಗೂ ಶಿಕ್ಷಕರ ಕೈಪಿಡಿಗಳನ್ನು ಸಿದ್ಧಪಡಿಸಿ ಎಲ್ಲಾ ಸರ್ಕಾರಿ ಶಾಲೆಗಳಿಗೆ ಒದಗಿಸಲಾಗಿದೆ.<br><br>• **ಕಲಿಕಾ ಬಲವರ್ಧನೆ**': 2023-24 ನೇ ಶೈಕ್ಷಣಿಕ ಸಾಲಿನಲ್ಲಿ ಸದರಿ ಕಾರ್ಯಕ್ರಮದಡಿ 1 ರಿಂದ 9 ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ಚಟುವಟಿಕೆ ಪುಸ್ತಕ ಮತ್ತು ಶಿಕ್ಷಕರಿಗೆ ಚಟುವಟಿಕೆ ಕೋಶಗಳ ರಚನೆ ಮತ್ತು ಭಾಷಾಂತರ ಮಾಡಿ ಶಾಲೆಗಳಿಗೆ ಸರಬರಾಜು ಮಾಡಲಾಗಿದೆ.<br><br>• **ಇ-ಕನ್ಟೆಂಟ್**: ತರಗತಿ ಪ್ರಕ್ರಿಯೆ ಮತ್ತು ಮೌಲ್ಯಾಂಕನ ಪ್ರಕ್ರಿಯೆಯನ್ನು ಕಲಿವಿನ ಫಲ ಆಧಾರಿತವಾಗಿ ಅನುಷ್ಠಾನಿಸುವ ಅಗತ್ಯವಿದ್ದು, ಪಠ್ಯದಲ್ಲಿನ ಕಲಿಕಾಂಶಗಳಿಗನುಗುಣವಾಗಿ ಕಲಿಕಾ ಪ್ರಕ್ರಿಯೆಯನ್ನು |

| | | |
|---|---|---|
| | | ಕೈಗೊಳ್ಳಲು ಹಾಗೂ ಆಯಾ ತರಗತಿಯ ನಿರೀಕ್ಷಿತ ಕಲಿಕಾ ಫಲಗಳನ್ನು ಸಾಧಿಸಲು ಮಾಧ್ಯಮವಾರು, ತರಗತಿವಾರು, ವಿಷಯವಾರು ಕಲಿಕಾ ಫಲ ಆಧಾರಿತ ಪ್ರಶ್ನೆ ಕೋಠಿಯನ್ನು ಸಿದ್ಧಪಡಿಸಲಾಗಿದೆ ಹಾಗೂ Website ನಲ್ಲಿ upload ಮಾಡಲಾಗಿದೆ.<br><br>• **ಇನ್ನೋವೇಟೀವ್ ಲ್ಯಾಬ್**: ವಿದ್ಯಾರ್ಥಿಗಳ ಕಲ್ಪನೆಯನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಹಾಗೂ ಅವರಲ್ಲಿ ಅವಿಷ್ಕಾರಾತ್ಮಕ ಮನೋಭಾವನೆಯನ್ನು ವೃದ್ಧಿಸುವಲ್ಲಿ ಸಹಕರಿಸಲು ರಾಜ್ಯದ ಮಹತ್ವಾಕಾಂಕ್ಷಿ ತಾಲ್ಲೂಕುಗಳಲ್ಲಿನ 73 ಕೆ.ಪಿ.ಎಸ್ ಮತ್ತು 50 ಆದರ್ಶ ವಿದ್ಯಾಲಯ ಶಾಲೆಗಳಲ್ಲಿ ಅವಿಷ್ಕಾರ್ ಇನ್ನೋವೇಟೀವ್ Labಗಳನ್ನು ಸ್ಥಾಪಿಸಲಾಗಿದೆ.<br>**ವೃತ್ತಿ ಶಿಕ್ಷಣ**: ಪ್ರೌಢ ಶಾಲಾ ವಿದ್ಯಾರ್ಥಿಗಳಲ್ಲಿ ವೃತ್ತಿಪರತೆ ಹಾಗೂ ಔದ್ಯೋಗಿಕತೆಯನ್ನು ಬೆಳೆಸಲು ಆಯ್ದ 375 ಶಾಲೆಗಳಲ್ಲಿ ವೃತ್ತಿ ಶಿಕ್ಷಣವನ್ನು ಒದಗಿಸಲಾಗುತ್ತಿದ್ದು, ವಿದ್ಯಾರ್ಥಿಗಳು 6 ಸೆಕ್ಟರ್‌ಗಳ ಅಡಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. |
| ಆ) | 2000ನೇ ಸಾಲಿನಿಂದ ಈಚೆಗೆ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಸೇವೆಗಳ ಸುಧಾರಣೆ ಕುರಿತು ಇಲಾಖೆಯಲ್ಲಿ ಯಾವುದಾದರೂ ಸಮಿತಿ, ಆಯೋಗಗಳನ್ನು ರಚಿಸಲಾಗಿದೆಯೇ; ಹಾಗಿದ್ದಲ್ಲಿ ಅವುಗಳು ನೀಡಿರುವ ವರದಿಗಳ ಪ್ರತಿಗಳನ್ನು ನೀಡುವುದು; ಈ ವರದಿಗಳ ಕುರಿತು ಸರ್ಕಾರದ ನಿಲುವೇನು; (ಮಾಹಿತಿ ನೀಡುವುದು) | • 2000ನೇ ಸಾಲಿನಿಂದ ಈಚೆಗೆ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಸೇವೆಗಳ ಸುಧಾರಣೆ ಕುರಿತು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಲ್ಲಿ ಯಾವುದೇ ಸಮಿತಿಗಳನ್ನು ಅಥವಾ ಆಯೋಗಗಳನ್ನು ರಚಿಸಲಾಗಿರುವುದಿಲ್ಲ.<br><br>• ಶ್ರೀ.ಎಸ್.ವಿ. ರಂಗನಾಥ್ ಭಾ.ಆ.ಸೇ., ನಿವೃತ್ತ ಮುಖ್ಯ ಕಾರ್ಯದರ್ಶಿ ಇವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಕಾರ್ಯಪಡೆಯ ವರದಿಯಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ 2020ರ ಅನುಷ್ಠಾನದ ಕುರಿತಂತೆ ಶಾಲಾ ಹಂತದ ರೂಪುರೇಷೆಗಳನ್ನು ನೀಡಿರುತ್ತಾರೆ.<br><br>• ಶ್ರೀ ಮದನ್ ಗೋಪಾಲ್, ಭಾ.ಆ.ಸೇ (ನಿವೃತ್ತ) ಅಧ್ಯಕ್ಷತೆಯಲ್ಲಿ ಕಾರ್ಯಪಡೆ ರಚಿಸಿ ರಾಷ್ಟ್ರೀಯ ಶಿಕ್ಷಣ |

| | | |
|---|---|---|
| | | ನೀತಿ 2020ರನ್ವಯ ಶಾಲಾ ಹಂತದ (ಪೂರ್ವ ಪ್ರಾಥಮಿಕ ಶಿಕ್ಷಣದಿಂದ ಪದವಿ ಪೂರ್ವ ಶಿಕ್ಷಣದವರೆಗೂ) ವ್ಯವಸ್ಥೆಯಲ್ಲಿ ಗುಣಮಟ್ಟ ಸುಧಾರಣೆಗಳನ್ನು ತರುವ ನಿಟ್ಟಿನಲ್ಲಿ ಅನುಷ್ಠಾನ ರೂಪುರೇಷೆಗಳನ್ನು ಸಿದ್ಧಪಡಿಸಿ ಅದರಂತೆ ಕ್ರಮವಹಿಸಲಾಗಿರುತ್ತದೆ.<br>ಶಿಕ್ಷಣದ ಲಭ್ಯತೆ, ಗುಣಮಟ್ಟ ಮತ್ತು ಸಮಾನತೆ ಸುಧಾರಿಸಲು ಮೇಲ್ಕಂಡ ವರದಿಗಳು ನೀಡಿರುವ ಶಿಫಾರಸ್ಸುಗಳನ್ವಯ ಕರ್ನಾಟಕದಲ್ಲಿ ನಿರಂತರ ಪ್ರಯತ್ನಗಳ ಮೂಲಕ ಹಲವಾರು ಶೈಕ್ಷಣಿಕ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಿ ಅವುಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸತತ ಪ್ರಯತ್ನ ಮಾಡಲಾಗುತ್ತಿದೆ. |
| ಇ) | ಸಮಿತಿ, ಆಯೋಗಗಳು ನೀಡಿರುವ ವರದಿಗಳಲ್ಲಿನ ಶಿಫಾರಸ್ಸುಗಳನ್ನು ಇಲಾಖೆಯಲ್ಲಿ ಅನುಷ್ಠಾನ ಗೊಳಿಸಲಾಗುತ್ತಿದೆಯೇ;<br>ಅನುಷ್ಠಾನಗೊಳಿಸಿದ್ದಲ್ಲಿ, ಶೈಕ್ಷಣಿಕ ಮತ್ತು ಆಡಳಿತಾತ್ಮಕ ಸೇವೆಗಳ ಗುಣಮಟ್ಟ ಸುಧಾರಣೆಗೊಂಡಿದೆಯೇ; ಸುಧಾರಣೆಗೊಳ್ಳದೇ ಇದ್ದಲ್ಲಿ ಕಾರಣಗಳೇನು; (ಮಾಹಿತಿ ನೀಡುವುದು) | ಶಿಕ್ಷಣದ ಲಭ್ಯತೆ, ಗುಣಮಟ್ಟ ಮತ್ತು ಸಮಾನತೆ ಸುಧಾರಿಸಲು ಮೇಲ್ಕಂಡ ವರದಿಗಳು ನೀಡಿರುವ ಶಿಫಾರಸ್ಸುಗಳನ್ವಯ ಕರ್ನಾಟಕದಲ್ಲಿ ನಿರಂತರ ಪ್ರಯತ್ನಗಳ ಮೂಲಕ ಹಲವಾರು ಶೈಕ್ಷಣಿಕ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಿ ಅವುಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸತತ ಪ್ರಯತ್ನ ಮಾಡಲಾಗುತ್ತಿದೆ. |
| ಈ) | ಸಮಿತಿ, ಆಯೋಗಗಳು ನೀಡಿರುವ ವರದಿಗಳಲ್ಲಿನ ಶಿಫಾರಸ್ಸುಗಳನ್ನು ಇಲಾಖೆಯಲ್ಲಿ ಅನುಷ್ಠಾನಗೊಳಿಸದೇ ಇದ್ದಲ್ಲಿ, ಕಾರಣಗಳೇನು; ಅನುಷ್ಠಾನಗೊಳಿಸುವುದು ಯಾವಾಗ? (ಸಂಪೂರ್ಣ ಮಾಹಿತಿ ನೀಡುವುದು) | ಉದ್ಭವಿಸುವುದಿಲ್ಲ. |

**ಸಂಖ್ಯೆ:**ಇಪಿ 122 ಎಸ್ ಟಿಬಿ 2025

**( ಎಸ್. ಮಧು ಬಂಗಾರಪ್ಪ )**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.